downloaded from: www.kpscvaani.com

## ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನ ನೀಡಿದ್ದ

# ಸಂವಿಧಾನದ 370 & 35ಎ ವಿಧಿ ರದ್ದು




2019 ಆಗಸ್ಟ್ 5 ಭಾರತೀಯರ ಪಾಲಿಗೆ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನವಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜಮ್ಮು & ಕಾಶ್ಮೀರಕ್ಕೆ ಸಂಬಂಧಿಸಿದ ಮಹತ್ವವಾದ ಮತ್ತು ಐತಿಹಾಸಿಕವಾದ ನಿರ್ಧಾರವನ್ನು ಕೈಗೊಂಡಿದೆ. ಈ ಮೂಲಕ ದೇಶದಲ್ಲಿ ಐಕ್ಯತೆಯನ್ನು ಉಂಟುಮಾಡುವಲ್ಲಿ ಐತಿಹಾಸಿಕ ಹೆಜ್ಜೆಯಾಗಿದೆ. ಸಂವಿಧಾನದ 370ನೇ ವಿಧಿಯು ಇನ್ನು ಮುಂದೆ ಜಮ್ಮು ಕಾಶ್ಮೀರಕ್ಕೆ ಅನ್ವಯವಾಗುವುದಿಲ್ಲ ಎಂದು ರಾಷ್ಟ್ರಪತಿ ರಮಾನಾಥ್ ಕೋವಿಂದ ಅವರು ಆದೇಶ ಹೊರಡಿಸಿದ್ದಾರೆ. ಅದರ ಪರಿಣಾಮವಾಗಿ ಇದುವರೆಗೂ ಜಮ್ಮು ಕಾಶ್ಮೀರಕ್ಕೆ ಇದ್ದ ವಿಶೇಷ ಅಧಿಕಾರ & ಸೌಲಭ್ಯಗಳು ರದ್ದಾಗಿವೆ. ಈ ಮೂಲಕ ದಶಕಗಳಿಂದ ಕಾಣುತ್ತಿದ್ದ ಭಾರತೀಯರ ಕನಸು ನನಸಾದಂತಾಗಿದೆ. ಈ ಮೂಲಕ ಆಗಸ್ಟ್ 5 ಕಾಶ್ಮೀರದ ಸ್ವಾತಂತ್ರ್ಯ ದಿನ, ವಂಶಾಡಳಿತ, ಅನ್ಯಾಯದಿಂದ ವೈವಿಧ್ಯಮಯ ರಾಜ್ಯದ ಎಲ್ಲರಿಗೂ ಸ್ವಾತಂತ್ರ್ಯ ಸಿಕ್ಕಿದೆ.

**ಸೂಚನೆ: ಪಿಎಸ್ಐ -ಪ್ರಬಂಧ & ಕೆಎಎಸ್ ಪರೀಕ್ಷೆಯ ಲೇಖನಗಳಿಗೆ ಉಪಯುಕ್ತ.**



"ಅಮಿತ್ ಶಾ ಅವರ ಮಾತುಗಳು ಜಮ್ಮು-ಕಾಶ್ಮೀರದಲ್ಲಾಗಿರುವ ಐತಿಹಾಸಿಕ ಅನ್ಯಾಯಗಳನ್ನು ಮತ್ತು ಸೋದರ ಸೋದರಿಯರ ಬಗ್ಗೆ ನಮಗಿರುವ ದೃಷ್ಟಿಕೋನವನ್ನು ಸ್ಪಷ್ಟವಾಗಿ ನಿರೂಪಿಸಿವೆ.

– ನರೇಂದ್ರ ಮೋದಿ
ಭಾರತದ ಪ್ರಧಾನಿ



"370ನೇ ವಿಧಿಯನ್ನು ರದ್ದು ಮಾಡಲು ಸಂವಿಧಾನದ ತಿದ್ದುಪಡಿ ಅಗತ್ಯವಿಲ್ಲ ಎಂದು ನಾನು ಹೇಳಿದ್ದು ಸತ್ಯವಾಯಿತು. ರಾಷ್ಟ್ರಪತಿಗಳು ಈಗಾಗಲೇ ಅಧಿಸೂಚನೆ ಹೊರಡಿಸಿರುವ ನಿರ್ಣಯವನ್ನು ಅಮಿತ್‌ಶಾ ಸದನಕ್ಕೆ ತಿಳಿಸಿದ್ದಾರೆ. ವಿಧಿ 370 ಅಂತ್ಯವಾಯಿತು. ಹಾಗೆಯೇ 35ಎ ವಿಧಿ ಕೂಡ.

– ಸುಬ್ರಮಣ್ಯ ಸ್ವಾಮಿ
ಬಿಜೆಪಿ ರಾಜ್ಯಸಭಾ ಸದಸ್ಯ.



"ಕಾಶ್ಮೀರದಲ್ಲಿ 370ನೇ ವಿಧಿ ಇಲ್ಲದೇ ಇರುತ್ತಿದ್ದರೆ. ಕಣಿವೆಯಲ್ಲಿ 41 ಸಾವಿರ ಜನರು ಪ್ರಾಣ ಕಳೆದುಕೊಳ್ಳುತ್ತಿರಲಿಲ್ಲ. ಇಡೀ ದೇಶದಲ್ಲಿ ಆಗಿರುವ ಅಭಿವೃದ್ಧಿಯಿಂದ ಇಲ್ಲಿನ ಜನರು ವಂಚಿತರಾಗುತ್ತಿರಲಿಲ್ಲ.

– ಅಮಿತ್ ಶಾ
ಕೇಂದ್ರ ಗೃಹ ಸಚಿವ

### ರಾಜ್ಯಸಭೆಯಲ್ಲಿ ಘೋಷಣೆ

- ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ರದ್ದುಮಾಡಿರುವ ರಾಷ್ಟ್ರಪತಿಗಳ ಅಧಿಸೂಚನೆ ಬಗೆಗಿನ ನಿರ್ಣಯವನ್ನು 2019ರ ಆಗಸ್ಟ್ 5ರಂದು ರಾಜ್ಯಸಭೆಯಲ್ಲಿ ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರು ಮಂಡಿಸಿದರು. ಅದರ ಜತೆಗೆ ಜಮ್ಮು ಕಾಶ್ಮೀರವನ್ನು ವಿಭಜಿಸುವ ಮಸೂದೆಯನ್ನು ಮಂಡಿಸಿದರು. ಈ ಮಸೂದೆಯನ್ನು ರಾಜ್ಯಸಭೆಯ ಸದಸ್ಯರುಗಳು ಎದ್ದು ನಿಂತು ಚಪ್ಪಾಳೆ ಮೂಲಕ ಸ್ವಾಗತಿಸಿದರು.
- ಜಮ್ಮು ಕಾಶ್ಮೀರಕ್ಕೆ ಅಡ್ಡಿಯಾಗಿದ್ದ 370ನೇ ವಿಧಿಯನ್ನು ರದ್ದುಗೊಳಿಸಿ ಅಧಿಸೂಚನೆಗೆ ಸಹಿ ಹಾಕಿದ್ದು, ಇನ್ನು ಮುಂದೆ ಜಮ್ಮು ಕಾಶ್ಮೀರಕ್ಕೆ 370ನೇ ವಿಧಿಯು ಅನ್ವಯವಾಗುವುದಿಲ್ಲ, ಜಮ್ಮು ಕಾಶ್ಮೀರದ ವಿಧಾನಸಭೆಯನ್ನು ಕೂಡ ವಿಸರ್ಜಿಸಲಾಗಿದೆ ಎಂದು ಘೋಷಿಸಿದರು.
- ರಾಜ್ಯಸಭೆಯಲ್ಲಿ ಈ ವಿಧೇಯಕದ ಪರ 125 ಮತಗಳು ಬಿದ್ದರೆ, ಈ ವಿಧೇಯಕದ ವಿರುದ್ಧ 61ಮತಗಳು ಚಲಾವಣೆಗೊಂಡಿದ್ದವು. ಈ ಮೂಲಕ ವಿಧೇಯಕವು ರಾಜ್ಯಸಭೆಯಲ್ಲಿ ಅಂಗೀಕಾರಗೊಂಡಿತು.
- 2019 ಆಗಸ್ಟ್ 6 ರಂದು ಇದೇ ವಿಧೇಯಕವನ್ನು ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿಮಂಡಿಸಿದರು. ಈ ವಿಧೇಯಕ ಲೋಕಸಭೆಯಲ್ಲೂ ಅಂಗೀಕಾರ ಪಡೆಯಿತು.

### ರಾಷ್ಟ್ರಪತಿಗಳ ಆದೇಶದ ಸಾರಾಂಶ

- ದೇಶದ ಸಂವಿಧಾನವು ಜಮ್ಮು-ಕಾಶ್ಮೀರಕ್ಕೆ ಕೂಡ ಅನ್ವಯವಾಗುತ್ತದೆ ಎನ್ನುವ ಆದೇಶವನ್ನು ರಾಷ್ಟ್ರಪತಿಗಳು 2019 ಆಗಸ್ಟ್ 5ರಂದು ಹೊರಡಿಸಿದ್ದಾರೆ.
- ಇದು ಆ ರಾಜ್ಯಕ್ಕೆ ಕೆಲವು ವಿಶೇಷ ಅಧಿಕಾರಗಳನ್ನು ನೀಡಿದ್ದ, ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ 1954ನ್ನು ಅಸಿಂಧುಗೊಳಿಸಿದೆ.
- "ಭಾರತದ ಸಂವಿಧಾನದಲ್ಲಿನ ಎಲ್ಲಾ ಅಂಶಗಳು ಜಮ್ಮು ಕಾಶ್ಮೀರಕ್ಕೆ ಕೂಡ ಕಡ್ಡಾಯವಾಗುತ್ತವೆ" ಎಂದು ರಾಷ್ಟ್ರಪತಿಗಳು ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

Scanned by CamScanner

Scanned by CamScanner

downloaded from: www.kpscvaani.com

### 370ನೇ ವಿಧಿ ರದ್ಧತಿಯ ಪ್ರಕ್ರಿಯೆ

- ❖ ಭಾರತ ಸಂವಿಧಾನದ 370ನೇ ವಿಧಿಯ 3ನೇ ಸೆಕ್ಷನ್ ಸ್ಪಷ್ಟವಾಗಿ ಹೀಗೆ ಹೇಳುತ್ತದೆ. ಈ ವಿಧಿಯಲ್ಲಿ ಒದಗಿಸಿರುವ ಅಧಿಕಾರದ ಪ್ರಕಾರ ರಾಷ್ಟ್ರಪತಿಗಳು, ಸಾರ್ವಜನಿಕ ಅಧಿಸೂಚನೆಯ ಮೂಲಕ ಈ ವಿಧಿಯ ಕಾರ್ಯಾಚರಣೆ ಅಥವಾ ರದ್ಧತಿ ಅಥವಾ ಬದಲಾವಣೆಗಳನ್ನು ತಾನು ಸೂಚಿಸಿದ ದಿನದಿಂದ ಅಳವಡಿಸಬಹುದು.
- ❖ ಅದಕ್ಕೆ 370ನೇ ವಿಧಿಯ (2)ನೇ ಸೆಕ್ಷನ್‌ನಲ್ಲಿ ಸೂಚಿಸಿರುವಂತೆ ರಾಜ್ಯದ ಸಂವಿಧಾನಿಕ ಸಭೆಯ ಶಿಫಾರಸ್ಸು ಅಗತ್ಯ. 370ನೇ ಸೆಕ್ಷನ್ 3ರ ಪ್ರಕಾರ ಹೇಳುವಂತೆ ರಾಷ್ಟ್ರಪತಿಗಳು ಈ ಕುರಿತು ಅಧಿಸೂಚನೆ ಹೊರಡಿಸಲು ಸಂವಿಧಾನಿಕ ಸಭೆಯ ಶಿಫಾರಸ್ಸು ಅಗತ್ಯ. ಆದರೆ ಜಮ್ಮು-ಕಾಶ್ಮೀರದಲ್ಲಿ ಸಂವಿಧಾನ ರಚನಾ ಸಭೆ ಅಸ್ತಿತ್ವದಲ್ಲಿಲ್ಲ.
- ❖ ಹೀಗಾಗಿ, ಪ್ರಾಯೋಗಿಕ ಅಗತ್ಯತೆಗಳಿಗಾಗಿ ವಿಧಾನ ಸಭೆಯೇ ಸಂವಿಧಾನ ಸಭೆಯ ಕಾರ್ಯವನ್ನು ಮಾಡಬೇಕಾಗುತ್ತದೆ. ಆದರೆ ಈಗ ಜಮ್ಮು ಕಾಶ್ಮೀರದಲ್ಲಿ ವಿಧಾನ ಸಭೆ ಇಲ್ಲ. ಆದರೆ ವಿಧಾನ ಸಭೆ ಅಧಿಕಾರವು ಸಂಸತ್ತಿಗೆ ಅಂದರೆ ರಾಜ್ಯ ಸಭೆ ಹಾಗೂ ಲೋಕಸಭೆಗೆ ವರ್ಗಾವಣೆ ಆಗಿದೆ. ಜಮ್ಮು ಕಾಶ್ಮೀರದ ವಿಧಾನಸಭೆಯು ನವೆಂಬರ್ ತಿಂಗಳಲ್ಲಿ ರದ್ದುಗೊಂಡಿದ್ದು, ರಾಜ್ಯಪಾಲರ ಆಡಳಿತ ಜಾರಿಯಲ್ಲಿರುವುದರಿಂದ, ಕಡ್ಡಾಯವಾಗಿ ವಿಧಾನ ಸಭೆ ಒಪ್ಪಿಗೆಯನ್ನು ಪಡೆಯಬೇಕಾದ ಅಗತ್ಯತೆ ಕೇಂದ್ರ ಸರ್ಕಾರಕ್ಕೆ ಇಲ್ಲ.
- ❖ ವಿಧಾನ ಸಭೆ ಅನುಪಸ್ಥಿತಿಯಲ್ಲಿ ಯಾವುದೇ ಕಾನೂನಿನ ಬದಲಾವಣೆ, ಜಾರಿ, ರದ್ದತಿಗೆ ಸಂಸತ್ತು ಹೊಣೆಯಾಗಿರುತ್ತದೆ. ಅದರಲ್ಲಿ 370ನೇ ವಿಧಿಯು ಸೇರಿದೆ. ಈ ಹಿಂದಿನ ಹಲವು ಸರ್ಕಾರಗಳು ಕೂಡ, 370ನೇ ವಿಧಿಯನ್ನು ತಿದ್ದುಪಡಿಗೊಳಿಸಿವೆ.
- ❖ ಕಾಂಗ್ರೆಸ್ ಸರ್ಕಾರ 1952ರಲ್ಲಿ ಹಾಗೂ 1962ರಲ್ಲಿ 370ನೇ ವಿಧಿಯನ್ನು ಸಂಸತ್ತಿನಲ್ಲೇ ಇದೇ ರೀತಿಯಲ್ಲೇ ತಿದ್ದುಪಡಿ ಮಾಡಿವೆ.

### ರದ್ಧತಿಗೂ ಮುನ್ನಾ ಕೇಂದ್ರ ಸರ್ಕಾರ ಕೈಗೊಂಡ ಸಿದ್ಧತೆಗಳು

- ❖ ಜಮ್ಮು ಕಾಶ್ಮೀರದಲ್ಲಿ ಜನರು ಗುಂಪು ಸೇರದಂತೆ ರಾಜ್ಯಾದ್ಯಂತ 144ನೇ ಸೆಕ್ಷನ್‌ನನ್ನು ಜಾರಿಗೊಳಿಸಿತು. ರಾಜ್ಯದ ಉದ್ದಕ್ಕೂ ಬಿಗಿ ಭದ್ರತೆಯನ್ನು ಸೃಷ್ಟಿಸಲು 90,000ಕ್ಕೂ ಹೆಚ್ಚು ಸೇನಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.
- ❖ ರಾಜ್ಯಾದ್ಯಂತ ಇಂಟರ್‌ನೆಟ್ & ಸಂವಹನ ಸೇವೆಗಳನ್ನು ಸ್ಥಗಿತಗೊಳಿಸಲಾಗಿತ್ತು.
- ❖ ಅಮರನಾಥ ಯಾತ್ರೆಯನ್ನು 15 ದಿನಗಳಿಗೆ ಮೊದಲೇ ಮೊಟಕುಗೊಳಿಸಲಾಯಿತು. ಸರ್ಕಾರವು ಜಮ್ಮುಕಾಶ್ಮೀರದಲ್ಲಿದ್ದ ಪ್ರವಾಸಿಗರನ್ನು ಹಾಗೂ ಯಾತ್ರಿಕರನ್ನು ಜಮ್ಮು ಕಾಶ್ಮೀರದಿಂದ ಹೊರಕ್ಕೆ ಕಳುಹಿಸಲಾಗಿತ್ತು.
- ❖ ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಮೆಹಬೂಬ್ ಮುಫ್ತಿ, ಒಮರ್ ಅಬ್ದುಲ್ಲಾ ಸೇರಿದಂತೆ ಕಾಶ್ಮೀರದ ಹಲವು ಮುಖಂಡರಿಗೆ ಗೃಹಬಂಧನ ಹೇರಲಾಗಿತ್ತು.
- ❖ ಶಾಂತಿ & ಸುವ್ಯವಸ್ಥೆಯನ್ನು ಕಾಪಾಡಲು ಸಕಲ ಸಿದ್ಧತೆಯನ್ನು ಮಾಡಲಾಗಿತ್ತು. ಭಾರತ & ಪಾಕ್ ಗಡಿಯುದ್ದಕ್ಕೂ ಸೇನಾ ಕಣ್ಗಾವಲು ಇಡಲಾಗಿತ್ತು.

## 370ನೇ ವಿಧಿ ಮತ್ತು 35ಎ ವಿಧಿ ರದ್ದತಿಯ ಪ್ರಮುಖ ರೂವಾರಿಗಳು

ಸಂವಿಧಾನದ 370ನೇ ವಿಧಿಯನ್ನು ಅಸಿಂಧುಗೊಳಿಸುವ ಮತ್ತು ಜಮ್ಮು-ಕಾಶ್ಮೀರವನ್ನು 2 ಕೇಂದ್ರಾಡಳಿತ ಪ್ರದೇಶವಾಗಿ ವಿಭಜಿಸುವ ಪ್ರಮುಖ ನಿರ್ಣಯದ ಹಿಂದೆ ಕೇಂದ್ರದಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸುತ್ತಿರುವ 6 ಮಂದಿ ಚಿಂತಕರ ಶ್ರಮ ಮತ್ತು ಚಿಂತನೆ ಇದೆ.



**ಪ್ರಧಾನಿ ನರೇಂದ್ರ ಮೋದಿ**

ಪ್ರಧಾನಿ ನರೇದ್ರ ಮೋದಿ ಅವರು ಗುಜರಾತಿನ ಮುಖ್ಯಮಂತ್ರಿ ಆಗುವುದಕ್ಕಿಂತ ಮೊದಲೇ ಜಮ್ಮು-ಕಾಶ್ಮೀರಕ್ಕೆ ಸಂಬಂಧಿಸಿದಂತೆ ಭಾರತದ ಧ್ವಜ ಹಾರಬೇಕೆಂದು ಪ್ರತಿಪಾದಿಸುತ್ತಾ ಬಂದಿದ್ದರು. 28 ವರ್ಷಗಳ ಹಿಂದೆ-ಯೇ 370ನೇ ವಿಧಿಯ ರದ್ದತಿಗೆ ಆಗ್ರಹಿಸಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. 1991 ಕಾಶ್ಮೀರದಲ್ಲಿ ಪ್ರತ್ಯೇಕವಾದಿಗಳ ಹಾವಳಿ ಹೆಚ್ಚಾಗಿತ್ತು. ಅಲ್ಲದೇ ಶ್ರೀನಗರದ ಲಾಲ್‌ಚೌಕ್‌ನಲ್ಲಿ ತ್ರಿವರ್ಣ ಧ್ವಜ ಹಾರಿಸಲು ಬಿಡುವುದಿಲ್ಲ ಎಂದು ಭಯೋತ್ಪಾದಕ & ಪ್ರತ್ಯೇಕವಾದಿ ಸಂಘಟನೆಗಳು ಸವಾಲು ಒಡ್ಡಿದ್ದವು. ಅಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಡಾ. ಮುರಳಿ ಮನೋಹರ್ ಜೋಶಿ ಏಕತಾ ಯಾತ್ರೆಯನ್ನು ಆರಂಭಿಸಿ ಪ್ರಾಣಭಯವನ್ನು ಲೆಕ್ಕಿಸದೆ ಶ್ರೀನಗರದ ಲಾಲ್‌ಚೌಕ್ ತಲುಪಿ, 1991ರ ಜನವರಿ 26ರಂದು ತ್ರಿವರ್ಣ ಧ್ವಜ ಹಾರಿಸಿದರು. ಆಗ ಅವರ ಯಾತ್ರೆ ಯುದ್ದಕ್ಕೂ ಬೆಂಬಲವಾಗಿ ನಿಂತಿದ್ದವರು ನರೇಂದ್ರ ಮೋದಿ. ಪ್ರಸ್ತುತ ಪ್ರಧಾನಿಯಾದ ನಂತರ ಜಮ್ಮು ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ 370ನೇ ವಿಧಿಯನ್ನು ರದ್ದುಗೊಳಿಸುವ ತೀರ್ಮಾನ ಕೈಗೊಂಡರು.

**ಅಮಿತ್ ಶಾ:-** ಕೇಂದ್ರದಲ್ಲಿ ಗೃಹ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿರುವ ಅಮಿತ್ ಶಾ ಅವರು ಸಮರ್ಥವಾಗಿ ನಿರ್ವಹಿಸಿದ್ದಾರೆ. 370ನೇ ವಿಧಿಯನ್ನು ಅಸಿಂಧುಗೊಳಿಸುವ ಮತ್ತು ರಾಜ್ಯ ವಿಭಜನೆಯ ಚಿಂತನೆಯನ್ನು ಸಂಸತ್ತಿನಲ್ಲಿ ಮಂಡಿಸುವ ಜವಾಬ್ದಾರಿಯನ್ನು ಮೋದಿ ಅವರು ಅಮಿತ್ ಶಾ ಅವರಿಗೆ ನೀಡಿದ್ದರು. ಪೂರ್ವ ಸಿದ್ಧತೆಯೊಂದಿಗೆ ಅಮಿತ್ ಶಾ ಅವರು ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

**ಅಜಿತ್ ದೋವಲ್:-** ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಈ ತೀರ್ಮಾನದ ಸಾಧಕ-ಬಾಧಕಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಸಲಹೆ ನೀಡಿದವರು. ಸೇನೆ, ಪೊಲೀಸ್ ಮತ್ತು ಗುಪ್ತಚರ ಇಲಾಖೆಗಳ ಮೂಲಕ ಮಾಹಿತಿ ಕಲೆಹಾಕಿ, ಯೋಜನೆಯ ಒಂದಿಷ್ಟು ಸುಳಿವು ಬಹಿರಂಗವಾಗದಂತೆ ಅವರು ಕಾರ್ಯ ನಿರ್ವಹಿಸಿದ್ದಾರೆ.

**ರಾಮ್ ಮಾಧವ್:-** ಜಮ್ಮು-ಕಾಶ್ಮೀರದಲ್ಲಿ ಬಿಜೆಪಿ ಉಸ್ತುವಾರಿಯನ್ನು ವಹಿಸಿರುವ ರಾಮ್ ಮಾಧವ್ ಅವರು ಕಾಶ್ಮೀರ ಜನರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದಾರೆ. ಅಲ್ಲಿನ ಜನರ ಭಾವನೆಗಳನ್ನು ಅರಿಯುವಲ್ಲಿ ಯಶಸ್ವಿಯಾಗಿದ್ದು, ಈ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

**ಸತ್ಯಪಾಲ್ ಮಲ್ಲಿಕ್:-** ರಾಜ್ಯಪಾಲರಾಗಿರುವ ಸತ್ಯಪಾಲ್ ಮಲ್ಲಿಕ್ ಅವರು ಈ ಕಾರ್ಯಾಚರಣೆಯ ಪ್ರಮುಖ ರೂವಾರಿಯಾಗಿದ್ದಾರೆ. ಸುಮಾರು ಒಂದು ವರ್ಷಕ್ಕೂ ಹಿಂದೆ ಸತ್ಯಪಾಲ್ ಮಲ್ಲಿಕ್ ಅವರನ್ನು ರಾಜ್ಯಪಾಲರನ್ನಾಗಿ ಜಮ್ಮು-ಕಾಶ್ಮೀರಕ್ಕೆ ಕಳುಹಿಸುವ ಮೂಲಕ ಕಾಶ್ಮೀರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬಿಜೆಪಿ ಯಶಸ್ವಿಯಾಗಿತ್ತು. ಮಲ್ಲಿಕ್ ಅವರು ರಾಜಕಾರಣಿಗಳು ಸೇರಿದಂತೆ ಸಮಾಜದ ವಿವಿಧ ಮುಖಂಡರೊಂದಿಗೆ ಸಂವಾದ ನಡೆಸಿ ಮಾಹಿತಿ ಕಲೆ ಹಾಕಿದ್ದರು.

**ದಿನೇಶ್ವರ್ ಶರ್ಮಾ:-** ಕೇಂದ್ರ ಸರ್ಕಾರದ ಮಧ್ಯಸ್ಥಿಕೆದಾರರಾಗಿ ದಿನೇಶ್ವರ್ ಶರ್ಮ ಅವರು ಕಾರ್ಯ ನಿರ್ವಹಿಸಿದ್ದಾರೆ. ಗುಪ್ತಚರ ಇಲಾಖೆಯ ಮಾಜಿ ನಿರ್ದೇಶಕರಾಗಿದ್ದ ದಿನೇಶ್ವರ್ ಶರ್ಮಾ ಅವರನ್ನು ಸರ್ಕಾರವು ಅಗತ್ಯವಾಗಿದ್ದ ತಳಮಟ್ಟದ ಮಾಹಿತಿಯನ್ನು ಸಂಗ್ರಹಿಸಲು ಕಳುಹಿಸಿದ್ದರು. 2 ವರ್ಷದ ಹಿಂದೆ ಇವರನ್ನು ಮಧ್ಯಸ್ಥಿಕೆದಾರನನ್ನಾಗಿ ಕೇಂದ್ರ ಸರ್ಕಾರ ನೇಮಕ ಮಾಡಿತ್ತು.

Scanned by CamScanner

Scanned by CamScanner

downloaded from: www.kpscvaani.com

## ಜಮ್ಮು ಕಾಶ್ಮೀರವನ್ನು ವಿಭಜಿಸುವ ಮಸೂದೆ

ಈ ಮಸೂದೆಯ ಪ್ರಕಾರ ಜಮ್ಮು ಕಾಶ್ಮೀರ ರಾಜ್ಯವನ್ನು ಜಮ್ಮು & ಕಾಶ್ಮೀರ ಹಾಗೂ ಲಡಾಕ್ ಎಂಬ 2 ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಲಾಯಿತು.

### 1. ಕೇಂದ್ರಾಡಳಿತ ಪ್ರದೇಶವಾಗಿ ಜಮ್ಮು ಕಾಶ್ಮೀರ

- ಜಮ್ಮು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವಾಗಿ ಘೋಷಿಸಲಾಗಿದ್ದು, ಇದು ಶಾಸನ ಸಭೆಯನ್ನು ಹೊಂದಿರಲಿದೆ. ಇದು ದೆಹಲಿ & ಪಾಂಡಿಚೇರಿ ಹೊಂದಿರುವ ಸ್ಥಾನಮಾನವನ್ನು ಪಡೆಯಲಿದೆ.
- ಜಮ್ಮು ಕಾಶ್ಮೀರದಲ್ಲಿ ವಿಧಾನಸಭೆ ಇರುತ್ತದೆ. ರಾಜ್ಯಪಾಲರ ಬದಲಿಗೆ ಲೆಫ್ಟಿನೆಂಟ್ ಗೌವರ್ನರ್ ಇರುತ್ತಾರೆ.
- ಜಮ್ಮು-ಕಾಶ್ಮೀರವು 1,01,387 ಚ.ಕಿ.ಮೀ ನಷ್ಟು ಭೂ ಪ್ರದೇಶವನ್ನು ಹೊಂದಿದೆ. 2011ರ ಜನಗಣತಿಯಂತೆ 1,25,41,302 ಮಂದಿ ಜನಸಂಖ್ಯೆಯನ್ನು ಹೊಂದಿದೆ. ಈ ಮೂಲಕ ಪ್ರಸ್ತುತವಾಗಿರುವ ಕೇಂದ್ರಾಡಳಿತ ಪ್ರದೇಶಗಳಲ್ಲೇ ವಿಸ್ತೀರ್ಣದಲ್ಲಿ ಅತಿ ದೊಡ್ಡ ಕೇಂದ್ರಾಡಳಿತ ಪ್ರದೇಶವಾಗಿದೆ.
- ಜಮ್ಮು ಪ್ರದೇಶದಲ್ಲಿ ಹಿಂದೂಗಳ ಪ್ರಾಬಲ್ಯ ಹೆಚ್ಚು, ಕಾಶ್ಮೀರ ವಲಯದ ಭೂ ಪ್ರದೇಶದ ಕೇವಲ ಶೇ.18 ಮಾತ್ರ, ಇಲ್ಲಿ ಭಾರತ ವಿರೋಧಿ ಧೋರಣೆಯ ಸುನ್ನಿ ಮುಸ್ಲಿಂ ಜನಾಂಗದವರೇ ಹೆಚ್ಚಾಗಿದ್ದಾರೆ. ವಿಧಾನ ಸಭೆ ಕ್ಷೇತ್ರ ಮರುವಿಂಗಡಣೆ ನಡೆದರೆ ಭಾರತ ವಿರೋಧಿಗಳ ಸಂಖ್ಯಾಬಲ ಕುಸಿಯಲಿದೆ.
- **ಶಾಸನ ಸಭೆ ಇರುವ ಕೇಂದ್ರಾಡಳಿತ ಪ್ರದೇಶಗಳು:-** ಪಾಂಡಿಚೇರಿ, ದೆಹಲಿ, ಜಮ್ಮು-ಕಾಶ್ಮೀರ (ಪ್ರಸ್ತಾಪಿತ ಕೇಂದ್ರಾಡಳಿತ ಪ್ರದೇಶ).

### 2. ಕೇಂದ್ರಾಡಳಿತ ಪ್ರದೇಶವಾಗಿ ಲಡಾಕ್

- ವಿಭಜಿತ ಜಮ್ಮು ಕಾಶ್ಮೀರ ರಾಜ್ಯದಲ್ಲಿ ಲಡಾಕ್‌ನ್ನು ಕೇಂದ್ರಾಡಳಿತ ಪ್ರದೇಶವಾಗಿ ಘೋಷಿಸಲಾಗಿದೆ. ಲಡಾಕ್‌ನಲ್ಲಿ ಯಾವುದೇ ವಿಧಾನಸಭೆ ಇರುವುದಿಲ್ಲ. ಲೆಫ್ಟಿನೆಂಟ್ ಗೌವರ್ನರ್‌ಗಳು ಇರುತ್ತಾರೆ.
- 2001ರ ಗಣತಿಯಂತೆ ಈ ಪ್ರದೇಶವು 59,196 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, ಬಹುತೇಕ ಪ್ರದೇಶಗಳು ಸಮುದ್ರ ಮಟ್ಟದಿಂದ 9,800 ಅಡಿಗಳಿಗಿಂತಲೂ ಎತ್ತರದಲ್ಲಿದೆ. ಇಲ್ಲಿನ ಜನಸಂಖ್ಯೆ 2.74ಲಕ್ಷ ಹೊಂದಿದೆ.
- ಕಾಶ್ಮೀರಿ ಪಂಡಿತರು, ಕಣಿವೆ ತೊರೆದ ಬಳಿಕ ಬೌದ್ಧರು, ಶಿಯಾ ಮುಸ್ಲಿಂ ಮರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಈ ಎರಡು ಸಮುದಾಯದ ಜನ ಮೊದಲಿಂದಲೂ ಭಾರತದೊಂದಿಗೆ ಇದ್ದಾರೆ.
- ಲಡಾಕ್ ಪ್ರದೇಶ ಹಿಮಚ್ಛಾದಿತ ಪರ್ವತ ಪ್ರದೇಶವಾಗಿದ್ದು, ಅಭಿವೃದ್ಧಿಯಿಂದ ಸಂಪೂರ್ಣ ವಂಚಿತವಾಗಿದೆ.
- ಲಡಾಕ್ ಈಗ ವಿಧಾನಸಭೆ ಹೊಂದಿರದ ಕೇಂದ್ರಾಡಳಿತ ಪ್ರದೇಶವಾಗಿದೆ. ಹಿಂದುಳಿದ ಲಡಾಕ್‌ಗೆ ಅಭಿವೃದ್ಧಿಯ ಒತ್ತು ನೀಡಬೇಕೆಂಬ ಬೇಡಿಕೆಗೆ ಇದರಿಂದ ಹೆಚ್ಚಿನ ಬಲ ಬರಲಿದೆ.

**ಶಾಸನ ಸಭೆ ಇಲ್ಲದ ಕೇಂದ್ರಾಡಳಿತ ಪ್ರದೇಶಗಳು:-** ಚಂಡೀಘಡ, ದಾದ್ರಾ & ನಗರ ಹವೇಲಿ, ದಿಯು & ದಾಮನ್, ಲಕ್ಷದ್ವೀಪ, ಅಂಡಮಾನ್ & ನಿಕೋಬಾರ್ ದ್ವೀಪಗಳು, ಲಡಾಕ್ (ಪ್ರಸ್ತಾಪಿತ ಕೇಂದ್ರಾಡಳಿತ ಪ್ರದೇಶ).

## ಕೇಂದ್ರಾಡಳಿತ ಪ್ರದೇಶ ಎಂದರೇನು?

ಕೇಂದ್ರಾಡಳಿತ ಪ್ರದೇಶವು ನೇರವಾಗಿ ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಗೆ ಬರಲಿದೆ. ಆದರೆ ಶಾಸನ ಸಭೆ ಇರುವ ಕೇಂದ್ರಾಡಳಿತ ಪ್ರದೇಶದಲ್ಲಿ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟ ಇರುತ್ತದೆ. ಇಲ್ಲಿ ರಾಜ್ಯಪಾಲರ ಬದಲಿಗೆ ಲೆಫ್ಟಿನೆಂಟ್ ಗವರ್ನರ್ ಇದ್ದಾರೆ. ಇವರು ರಾಷ್ಟ್ರಪತಿಗಳ ಪ್ರತಿನಿಧಿಯಾಗಿದ್ದು, ವಿಶೇಷ ಅಧಿಕಾರ ಹೊಂದಿದ್ದಾರೆ. ಜಮ್ಮು-ಕಾಶ್ಮೀರದಲ್ಲಿ ಲೆಫ್ಟಿನೆಂಟ್ ಗವರ್ನರ್ ಮೂಲಕ ಕೇಂದ್ರ ಸರ್ಕಾರಕ್ಕೆ ಕಾನೂನು ಸುವ್ಯವಸ್ಥೆ, ಭದ್ರತಾ ಪಡೆ ಭೂಮಿಯ ಹಕ್ಕು ಸೇರಿ ಇತರ ವಿಚಾರಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರಲಿವೆ. ಇದರಿಂದ ಕಾಶ್ಮೀರ ಕಣಿವೆಯಲ್ಲಿನ ವಿಧಾನಸಭಾ ಸ್ಥಾನಗಳ ಮೂಲಕ ರಾಜಕೀಯವಾಗಿ ಆಟ ಆಡುತ್ತಿದ್ದ ಎನ್‌ಸಿ ಮತ್ತು ಪಿಡಿಪಿಗೆ ಹಿನ್ನಡೆಯಾಗಲಿದೆ.

**ಅತಿ ದೊಡ್ಡ ಕೇಂದ್ರಾಡಳಿತ ಪ್ರದೇಶ:-** ಜಮ್ಮು-ಕಾಶ್ಮೀರ ರಾಜ್ಯವನ್ನು ವಿಭಜಿಸಿ ಎರಡು ಕೇಂದ್ರಾಡಳಿತ ಪ್ರದೇಶಗಳನ್ನು ಕೇಂದ್ರ ಸರ್ಕಾರವು ನಿರ್ಮಿಸಿದ್ದು, ಈ ಮೂಲಕ ಈ ಎರಡು ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಈ ಕೇಂದ್ರಾಡಳಿತ ಪ್ರದೇಶಗಳು ವಿಸ್ತೀರ್ಣದಲ್ಲಿ ಅತಿ ದೊಡ್ಡ ಕೇಂದ್ರಾಡಳಿತ ಪ್ರದೇಶಗಳಾಗಿವೆ. **ವಿಸ್ತೀರ್ಣದಲ್ಲಿ ಕಾಶ್ಮೀರ ಅತಿ ದೊಡ್ಡ ಕೇಂದ್ರಾಡಳಿತ ಪ್ರದೇಶ** ಎನಿಸಿಕೊಂಡರೆ **ಲಡಾಕ್ ನಂತರದ ಸ್ಥಾನವನ್ನು** ಪಡೆದಿದೆ.

## 370ನೇ ವಿಧಿಯನ್ನು ರದ್ದು ಪಡಿಸಲು ಪ್ರಮುಖವಾದ ಕಾರಣಗಳು

- ಈ ವಿಧಿಯನ್ನು ವ್ಯಾಪಕವಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದ್ದು, ಇದರಿಂದ ಅನೇಕ ದುಷ್ಪರಿಣಾಮಗಳಾಗಿವೆ ಎಂದು ವಾದವಾಗಿತ್ತು.
- ಭಾರತೀಯ ಸಂವಿಧಾನದ ಎಲ್ಲಾ ವಿಧಿಗಳು ಅನ್ವಯವಾಗುತ್ತಿರಲಿಲ್ಲ. ನಮ್ಮ ಸಂವಿಧಾನದ 260 ಪರಿಚ್ಛೇದಗಳು ಮಾತ್ರ ಇಲ್ಲಿ ಚಾಲ್ತಿಯಲ್ಲಿದ್ದವು.
- ಇಂಡಿಯನ್ ಪೀನಲ್ ಕೋಡ್ (ಐಪಿಸಿ) ಬದಲಿಗೆ **ರಣವೀರ್ ಪೀನಲ್ ಕೋಡ್** (ಆರ್‌ಪಿಸಿ) ಜಾರಿಯಲ್ಲಿತ್ತು.
- ಜಮ್ಮು-ಕಾಶ್ಮೀರ ರಾಜ್ಯದಲ್ಲಿ ಪ್ರತ್ಯೇಕ ಸಂವಿಧಾನ ಮತ್ತು ಪ್ರತ್ಯೇಕ ಧ್ವಜ ಸಂಹಿತೆ ಅಸ್ತಿತ್ವದಲ್ಲಿತ್ತು.
- ಜನಪ್ರತಿನಿಧಿಗಳು ಜಮ್ಮು-ಕಾಶ್ಮೀರದ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸುತ್ತಿದ್ದರೆ ಹೊರತು ಭಾರತದ ಸಂವಿಧಾನದ ಹೆಸರಿನಲ್ಲಿ ಅಲ್ಲ.
- ಇತರೆ ರಾಜ್ಯದವರಿಗೆ ಇಲ್ಲಿ ಭೂಮಿ ಖರೀದಿಸಲು, ಶಾಶ್ವತವಾಗಿ ನೆಲೆಸಲು ಅವಕಾಶವಿರಲಿಲ್ಲ.
- ರಾಜ್ಯದಲ್ಲಿ ಇತರೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ಇಲ್ಲ. ಪರಿಶಿಷ್ಟ ಪಂಗಡದವರಿಗೂ 1991ರ ವರೆಗೂ ಮೀಸಲಾತಿ ಇರಲಿಲ್ಲ. ಈಗ ಅವರಿಗೆ ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ನೀಡಲಾಗುತ್ತಿದ್ದರೂ ರಾಜಕೀಯ ಮೀಸಲಾತಿ ಇಲ್ಲ.
- ಜಮ್ಮು-ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಆಯೋಗ, ಮಹಿಳಾ ಆಯೋಗ, ಅಲ್ಪಸಂಖ್ಯಾತರ ಕಲ್ಯಾಣ ಆಯೋಗಗಳಿಲ್ಲ.
- ಆರ್‌ಟಿಐ ಅನ್ವಯವಾಗುತ್ತಿರಲಿಲ್ಲ.
- ಭಾರತದ ಇನ್ನಿತರ ರಾಜ್ಯಗಳಲ್ಲಿ ವಿಧಾನ ಸಭೆಗಳ ಕಾಲಾವಧಿ 5 ವರ್ಷಗಳಾಗಿದ್ದರೂ, ಜಮ್ಮು-ಕಾಶ್ಮೀರದ ವಿಧಾನ ಸಭೆ ಅವಧಿ 6 ವರ್ಷಗಳಾಗಿತ್ತು.
- ಸಂಪೂರ್ಣವಾಗಿ ದೇಶದಲ್ಲಿ 2002ರಲ್ಲಿ ಲೋಕಸಭೆ ಮತದಾರ ಕ್ಷೇತ್ರಗಳ ಮರು ವಿಂಗಡಣೆ ಆಗಿದ್ದರೂ, ಜಮ್ಮು-ಕಾಶ್ಮೀರದಲ್ಲಿ ಆಗಿರಲಿಲ್ಲ.

Scanned by CamScanner

Scanned by CamScanner

downloaded from: www.kpscvaani.com

## ಅಭಿವೃದ್ಧಿಗೆ ಮಾರಕ ಮತ್ತು ಭಯೋತ್ಪಾದನೆಗೆ ಪ್ರೇರಕವಾಗಿದ್ದ ವಿಶೇಷ ಸ್ಥಾನಮಾನ

- ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿರುವುದರಿಂದ ಜಮ್ಮು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ನೆಲೆಗೊಳ್ಳಲು ದೊಡ್ಡ ತೊಡಕಾಗಿತ್ತು.
- ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡಲು ಮತ್ತು ಬಡತನ ಮಡುಗಟ್ಟಲು ಇದು ಕಾರಣವಾಗಿತ್ತು.
- ಮಹಿಳೆಯರು, ದಲಿತರು & ಆದಿವಾಸಿಗಳಿಗೆ ಮಾರಕವಾಗಿತ್ತು.
- ಇದು ಭಯೋತ್ಪಾದನೆಗೆ ಮೂಲವಾಗಿತ್ತು.
- ಕಾಶ್ಮೀರದಲ್ಲಿ 1989ರಿಂದ 2018ರ ನಡುವೆ 41,849 ಮಂದಿಯ ಹತ್ಯೆಯಾಗಿದೆ ಎಂಬುದು ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರ ವಾದವಾಗಿದೆ.
- ಕಾಶ್ಮೀರ ಕಣಿವೆಯನ್ನು ಭಯೋತ್ಪಾದನೆಯಿಂದ ಮುಕ್ತಿಗೊಳಿಸುವ ಉದ್ದೇಶದಿಂದ 370ನೇ ವಿಧಿಯನ್ನು ತೆಗೆದು ಹಾಕುವುದು ಸೂಕ್ತ ಎಂದು ವಾದವನ್ನು ಸಂಸತ್ತಿನಲ್ಲಿ ಅಮಿತ್ ಶಾ ಮಂಡಿಸಿದರು.
- ಕಾಶ್ಮೀರಿಗಳು ಬಡವರಾಗಿ ಉಳಿದಿದ್ದಾರೆ. ಕಾಶ್ಮೀರದ ಜಮೀನಿಗೆ ಈಗ ಬೇಡಿಕೆ-ಯೂ ಇಲ್ಲ, ಬೆಲೆಯೂ ಇಲ್ಲ. ಜಮೀನಿನ ಮಾಲಿಕತ್ವ ಸಮಸ್ಯೆ ಇರುವುದರಿಂದ ಯಾರೂ ಇಲ್ಲಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗುತ್ತಿಲ್ಲ.
- ಕಾಶ್ಮೀರದಲ್ಲಿ ಶಾಲಾ-ಕಾಲೇಜುಗಳನ್ನು ಮುಚ್ಚಿಸುವಂತೆ ಅಲ್ಲಿನ ಯುವಕರನ್ನು ರಾಜಕೀಯ ನಾಯಕರು ಪ್ರೇರೇಪಿಸುತ್ತಿದ್ದಾರೆ. ಅದೇ ನಾಯಕರ ಮಕ್ಕಳು ಲಂಡನ್-ಅಮೆರಿಕಾಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

## ಏನಿದು 35ಎ ವಿಧಿ?

- 1954ರ ಮೇ 14 ರಂದು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ **ಜವಾಹರ್‌ಲಾಲ್** ನೇತೃತ್ವದ ರಾಷ್ಟ್ರಪತಿಗಳ ಆದೇಶದ ಮೇರೆಗೆ ಅಂದಿನ ರಾಷ್ಟ್ರಪತಿ **ಡಾ. ಬಾಬು ರಾಜೇಂದ್ರ ಪ್ರಸಾದ್** ಅವರು ಸಂವಿಧಾನಿಕ ಆದೇಶದ ಮೂಲಕ ಅಂದಿನ ಜಮ್ಮು-ಕಾಶ್ಮೀರ ಸರ್ಕಾರದ ಒಪ್ಪಿಗೆಯೊಂದಿಗೆ 35ಎ ವಿಧಿಯನ್ನು ಸಂವಿಧಾನಕ್ಕೆ ಸೇರಿಸಿದರು. ಇದು ಮೂಲ ಸಂವಿಧಾನದಲ್ಲಿ ಇರಲಿಲ್ಲ. ಬದಲಿಗೆ ಸಂವಿಧಾನದ ಅನುಬಂಧದಲ್ಲಿ 35ಎ ಅನ್ನು ಪಟ್ಟಿ ಮಾಡಲಾಗಿದೆ.
- 1956ರಲ್ಲಿ ಜಮ್ಮು ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನವನ್ನು ರಚಿಸಲಾಗಿದ್ದು, ಇದು ರಾಜ್ಯದ ಶಾಶ್ವತ ನಿವಾಸಿಗಳನ್ನು ನಿರ್ಧರಿಸುತ್ತದೆ.
- ಸಂವಿಧಾನದ 35ಎ ವಿಧಿಯು ಜಮ್ಮು-ಕಾಶ್ಮೀರ ವಿಧಾನಸಭೆಗೆ ರಾಜ್ಯದ ಶಾಶ್ವತ ನಿವಾಸಿಗಳನ್ನು ವ್ಯಾಖ್ಯಾನಿಸಲು ಅವರ ವಿಶೇಷ ಹಕ್ಕು ಹಾಗೂ ಸೌಲಭ್ಯವನ್ನು ನಿರ್ಧರಿಸುವ ಹಕ್ಕನ್ನು ನೀಡಲಾಗುತಿತ್ತು.




- 35ಎ ವಿಧಿ ಅನ್ವಯ ಜಮ್ಮು ಕಾಶ್ಮೀರದಲ್ಲಿ ಶಾಶ್ವತ ನಿವಾಸಿಗಳ ಸ್ಥಾನ-ಮಾನ ಪಡೆದವರು ಮತದಾನ, ರಾಜ್ಯ ಸರ್ಕಾರದ ನೌಕರಿ, ಸ್ವಂತ ಭೂಮಿ, ಭದ್ರತೆ, ಸಾರ್ವಜನಿಕ ಉದ್ಯೋಗ ಹಾಗೂ ಕಾಲೇಜು ದಾಖಲಾತಿಯ ಹಕ್ಕು ಹೊಂದುತ್ತಾರೆ. ಆದರೆ ಶಾಶ್ವತ ನಿವಾಸಿಗಳಲ್ಲದವರು ಈ ಹಕ್ಕುಗಳಿಂದ ವಂಚಿತರಾಗಿದ್ದರು.
- 35ಎ ವಿಧಿ ಅನ್ವಯ 1954ರ ಮೇ 14ಕ್ಕೆ ಮುನ್ನ ರಾಜ್ಯದಲ್ಲಿ ನೆಲೆಸಿದ್ದವರು ಅಥವಾ ಕಳೆದ 10 ವರ್ಷಗಳಿಂದ ರಾಜ್ಯದಲ್ಲಿ ನೆಲೆಸಿದ್ದು, ಕಾನೂನುಬದ್ಧವಾಗಿ ಸ್ಥಿರಾಸ್ತಿಯನ್ನು ಹೊಂದಿರುವವರಿಗಷ್ಟೇ ರಾಜ್ಯದ ಶಾಶ್ವತ ನಿವಾಸಿಯ ಹಕ್ಕು ದೊರೆಯುತ್ತದೆ.
- ವಿದ್ಯಾರ್ಥಿ ವೇತನ ಸೇರಿದಂತೆ ಸರ್ಕಾರದ ಯಾವುದೇ ನೆರವನ್ನು ರಾಜ್ಯದ ಶಾಶ್ವತ ನಿವಾಸಿಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.
- 35ಎ ವಿಧಿ ಅನ್ವಯ ಮೂಲ ನಿಯಮವು ಮಹಿಳೆಯರ ವಿಚಾರದಲ್ಲಿ ತಾರತಮ್ಯ ಹೊಂದಿದ್ದು, ಅದರ ಪ್ರಕಾರ ಹೊರ ರಾಜ್ಯದ ವ್ಯಕ್ತಿಯನ್ನು ವಿವಾಹವಾಗುವ ಜಮ್ಮು ಕಾಶ್ಮೀರದ ಮಹಿಳೆ ಶಾಶ್ವತ ನಿವಾಸಿ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಆದರೆ 2002ರಲ್ಲಿ ಜಮ್ಮು ಕಾಶ್ಮೀರ ಹೈಕೋರ್ಟ್ ಐತಿಹಾಸಿಕ ತೀರ್ಪಿನಲ್ಲಿ ಇಂತಹ ಮಹಿಳೆ ತನ್ನ ಹಕ್ಕನ್ನು ಕಳೆದುಕೊಳ್ಳುವುದಿಲ್ಲ ಆದರೆ ಈ ದಂಪತಿಗೆ ಜನಿಸುವ ಮಕ್ಕಳಿಗೆ ಶಾಶ್ವತ ನಿವಾಸಿ ಹಕ್ಕು ಇರುವುದಿಲ್ಲ ಎಂದು ತೀರ್ಪು ನೀಡಿತು.

### 35ಎ ವಿಧಿಯನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ

- 2014ರಲ್ಲಿ **'ವಿ ದಿ ಸಿಟಿಜನ್'** ಎಂಬ ಸ್ವಯಂ ಸೇವಾ ಸಂಘಟನೆಯು 35ಎ ವಿಧಿಯ ಔಚಿತ್ಯವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಈ ವಿಧಿಯನ್ನು ಸಂವಿಧಾನದ 368ನೇ ವಿಧಿ ಅನ್ವಯ ತಿದ್ದುಪಡಿ ಮಾಡದೆ ಸೇರಿಸಲಾಗಿತ್ತು. ಇದನ್ನು ಸಂಸತ್‌ನಲ್ಲಿ ಮಂಡಿಸದೇ ನೇರವಾಗಿ ಜಾರಿಗೆ ತರಲಾಗಿದೆಯೆಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿತ್ತು. ರಾಜ್ಯದ ಮಹಿಳೆಯರು ಹೊರ ರಾಜ್ಯದವರನ್ನು ಮದುವೆಯಾದರೆ ಅಂತಹವರ ಮಕ್ಕಳಿಗೆ ಶಾಶ್ವತ ನಿವಾಸಿ ಹಕ್ಕು ಕಸಿದುಕೊಳ್ಳುವ 35ಎ ವಿಧಿಯನ್ನು ಜಮ್ಮು ಕಾಶ್ಮೀರದ ಇಬ್ಬರು ಮಹಿಳೆಯರು ಸುಪ್ರಿಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

## ದೇಶೀಯ ಸಂಸ್ಥಾನಗಳು ಭಾರತಕ್ಕೆ ಸೇರ್ಪಡೆ

**1947 ಭಾರತ ಸ್ವಾತಂತ್ರ್ಯ ಕಾಯ್ದೆಯಲ್ಲಿ ದೇಶೀಯ ಸಂಸ್ಥಾನಗಳಿಗೆ 3 ಆಯ್ಕೆಗಳನ್ನು ನೀಡಲಾಗಿತ್ತು.**

1) ಭಾರತದ ಒಕ್ಕೂಟಕ್ಕೆ ವಿಲೀನವಾಗಬಹುದು. 2) ಪಾಕಿಸ್ತಾನಕ್ಕೆ ವಿಲೀನವಾಗಬಹುದು. 3) ಸ್ವತಂತ್ರವಾಗಿ ಇರಬಹುದು

1947ರ ಆಗಸ್ಟ್ 15 ರಂದು ಸ್ವಾತಂತ್ರ್ಯ ಬಂದಾಗ ದೇಶದಲ್ಲಿ 552 ದೇಶೀಯ ಸಂಸ್ಥಾನಗಳಿದ್ದವು. ಅಂದಿನ ದೇಶದ ಉಪ ಪ್ರಧಾನಿ ಮತ್ತು ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಕೋರಿಕೆಯ ಮೇರೆಗೆ 549 ದೇಶೀಯ ಸಂಸ್ಥಾನಗಳು ಭಾರತದ ಒಕ್ಕೂಟಕ್ಕೆ ಸೇರ್ಪಡೆಗೊಂಡವು ಆದರೆ ಜಮ್ಮು-ಕಾಶ್ಮೀರದ **ದೊರೆ ಹರಿಸಿಂಗ್, ಜುನಾಗಡದ ನವಾಬ** ಮತ್ತು **ಹೈದರಾಬಾದಿನ ನಿಜಾಮರು** ಭಾರತದ ಒಕ್ಕೂಟಕ್ಕೆ ಸೇರ್ಪಡೆಗೊಳ್ಳಲು ನಿರಾಕರಿಸಿದರು. **ಜುನಾಗಡದ ನವಾಬನು** ಪಾಕಿಸ್ತಾನಕ್ಕೆ ಸೇರ್ಪಡೆಗೊಳ್ಳಲು ಸಿದ್ಧತೆ ನಡೆಸಿದ್ದನು. ಈ ಸಂದರ್ಭದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು **ಜನಮತ ಗಣನೆ** ಮೂಲಕ ಜುನಾಗಡವನ್ನು ಒಕ್ಕೂಟಕ್ಕೆ ಸೇರ್ಪಡೆ ಮಾಡಿದರು. ಅದೇ ರೀತಿ ಹೈದರಾಬಾದಿನ ನಿಜಾಮನು ಸ್ವತಂತ್ರವಾಗಿರಲು ಬಯಸಿದ್ದನು. ಆದರೆ ಪಟೇಲರು 1948 ಸೆಪ್ಟೆಂಬರ್ 13 ರಿಂದ 17ರವರೆಗೆ **'ಆಪರೇಷನ್ ಪೋಲೋ'** ಕಾರ್ಯಚರಣೆ ಮೂಲಕ ಹೈದರಾಬಾದ್ ಅನ್ನು ಒಕ್ಕೂಟಕ್ಕೆ ಸೇರ್ಪಡೆ ಮಾಡಿಕೊಂಡರು.


The Hindustan Times

KASHMIR ACCEDES TO INDIA

26 October, 1947

Scanned by CamScanner

Scanned by CamScanner

downloaded from: www.kpscvaani.com

## ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿ ಬಗ್ಗೆ ಮಾಹಿತಿ

ರಾಜಾ ಹರಿಸಿಂಗ್ ನೊಂದಿಗೆ ಮಾಡಿಕೊಂಡ ಒಪ್ಪಂದದ ಹಿನ್ನಲೆಯಲ್ಲಿ 370ನೇ ವಿಧಿಯನ್ನು 1949ರಲ್ಲಿ ರೂಪಿಸಲಾಗಿತ್ತು. ಜಮ್ಮು ಕಾಶ್ಮೀರಕ್ಕೆ ತಾತ್ಕಾಲಿಕವಾಗಿ ವಿಶೇಷ ಸ್ವಾಯತ್ತತೆ ನೀಡಲಾಗುತ್ತಿದೆ ಎಂದು ಈ ವಿಧಿಯಲ್ಲಿ ಹೇಳಲಾಗಿದೆ.

### ಜಮ್ಮು-ಕಾಶ್ಮೀರವು ಸ್ವಾಯತ್ತತೆಯೊಂದಿಗೆ ಭಾರತಕ್ಕೆ ವಿಲೀನ

- ಜಮ್ಮು-ಕಾಶ್ಮೀರವನ್ನು ಆಳುತ್ತಿದ್ದ ಅಂದಿನ ದೊರೆ ರಾಜಾ ಹರಿಸಿಂಗ್ ಯಾವ ದೇಶಕ್ಕೂ ಸೇರದೆ ಸ್ವಾತಂತ್ರವಾಗಿರಲು ಬಯಸಿದನು. ಆದರೆ ಪಾಕಿಸ್ತಾನದ ಗೆರಿಲ್ಲಾಗಳು ಕಾಶ್ಮೀರವನ್ನು ಒತ್ತುವರಿ ಮಾಡಿಕೊಂಡರು.
- ಅವರಿಂದ ತಮ್ಮ ಸಂಸ್ಥಾನವನ್ನು ರಕ್ಷಿಸಿಕೊಳ್ಳುವ ಉದ್ದೇಶದಿಂದ ರಾಜ ಹರಿಸಿಂಗ್‌ನು ಭಾರತದ ಜತೆ ವಿಲೀನವಾಗಲು ಒಪ್ಪಿಕೊಂಡನು. ಈ ಸಂಬಂಧ 1947 ಅಕ್ಟೋಬರ್ 26 ರಂದು ಹರಿಸಿಂಗ್ ಮತ್ತು ಭಾರತದ ಮೊದಲ ಪ್ರಧಾನಿ ನೆಹರೂ ಅವರೊಂದಿಗೆ ಒಪ್ಪಂದವಾಯಿತು.
- ಇದನ್ನು ವಿಲೀನ ಒಪ್ಪಂದ ಎಂದು ಕರೆಯಲಾಗುತ್ತದೆ. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಅಧಿಕಾರ ಮತ್ತ ವಿಶೇಷ ಸ್ಥಾನಮಾನ ನೀಡುವ ಅವಕಾಶ ಷರತ್ ಈ ವಿಲೀನದ ಒಪ್ಪಂದಲ್ಲೇ ಇತ್ತು.
- ಈ ಒಪ್ಪಂದದ ಪ್ರಕಾರ ಜಮ್ಮು-ಕಾಶ್ಮೀರಕ್ಕೆ ಸಂಬಂಧಿಸಿದಂತೆ ರಕ್ಷಣೆ, ವಿದೇಶಾಂಗ ವ್ಯವಹಾರ ಮತ್ತು ಸಂಪರ್ಕ ಕ್ಷೇತ್ರಗಳನ್ನು ಮಾತ್ರ ಭಾರತದ ಸರ್ಕಾರದ ಅಧೀನಕ್ಕೆ ನೀಡಲಾಗಿತ್ತು.
- ಈ ಕ್ಷೇತ್ರಗಳಲ್ಲಿ ಭಾರತ ಸರ್ಕಾರದ ಕಾನೂನುಗಳನ್ನು ಜಮ್ಮು-ಕಾಶ್ಮೀರದ ಮೇಲೆ ಹೇರುವ ಮುನ್ನ ಅಲ್ಲಿನ ರಾಜ್ಯಸರ್ಕಾರದ ಸಮ್ಮತಿ ಪಡೆಯುವುದು ಕಡ್ಡಾಯವಾಗಿತ್ತು. ಹೀಗಾಗಿ ಭಾರತದೊಂದಿಗೆ ವಿಲೀನವಾದರೂ ಜಮ್ಮು-ಕಾಶ್ಮೀರವು ಭಾಗಶಃ ಸ್ವಾತಂತ್ರ್ಯ ರಾಜ್ಯವಾಗಿತ್ತು. ಒಪ್ಪಂದ ಪತ್ರದಲ್ಲಿ **ರಾಜಾ ಹರಿಸಿಂಗ್‌ನ ಒಂದು ಷರತ್ತು ಹೀಗಿದೆ:**
- ವಿಲೀನ ಪತ್ರದಲ್ಲಿನ ತನ್ನ ಷರತ್ತುಗಳನ್ನು ಯಾವುದೇ ತಿದ್ದುಪಡಿ ಕಾಯ್ದೆ ಅಥವಾ **1947ರ ಭಾರತ ಸ್ವಾತಂತ್ರ್ಯ ಕಾಯ್ದೆ** ಮೂಲಕ ಬದಲಿಸುವಂತಿಲ್ಲ. ನಾನು ಒಪ್ಪಿಗೆ ಸೂಚಿಸಿರುವ ಪೂರಕ ಒಪ್ಪಂದದ ಮೂಲಕವಷ್ಟೇ ಅಂತಹ ಒಪ್ಪಂದಗಳನ್ನು ಮಾಡಬೇಕು.

### 370ನೇ ವಿಧಿಯ ಪ್ರಮುಖ ಅಂಶಗಳು

- ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ವಾಯತ್ತತೆಯನ್ನು ಒದಗಿಸುತ್ತದೆ. ಇದರಡಿಯಲ್ಲಿ ಜಮ್ಮು ಕಾಶ್ಮೀರದಲ್ಲಿ ರಕ್ಷಣೆ, ವಿದೇಶಾಂಗ ವ್ಯವಹಾರ ಹಾಗೂ ಸಂವಹನ ಈ ಮೂರು ಕ್ಷೇತ್ರಗಳನ್ನು ಹೊರತು ಪಡಿಸಿ ಬೇರಾವುದೇ ಕಾನೂನು ಜಾರಿಗೊಳಿಸುವ ಮುನ್ನ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಅನುಮತಿ ಪಡೆಯಬೇಕು.
- ಯುದ್ಧ, ಬಾಹ್ಯ ಆಕ್ರಮಣ ಹೊರತಾಗಿ ಬೇರಾವುದೇ ಸಂದರ್ಭದಲ್ಲಿ ಜಮ್ಮು ಕಾಶ್ಮೀರದಲ್ಲಿ ತುರ್ತು ಪರಿಸ್ಥಿತಿ ಹೇರಲು ಕೇಂದ್ರಕ್ಕೆ ಅಧಿಕಾರವಿಲ್ಲ. ಆಂತರಿಕ ಗಲಬೆ, ರಾಜಕೀಯ ಅಸ್ಥಿರತೆ ಮುಂತಾದ ಸಂದರ್ಭದಲ್ಲಿ ರಾಜ್ಯ ಸರ್ಕಾರದ, ರಾಜ್ಯಪಾಲರ ಮನವಿ ಅಥವಾ ಸೂಚನೆ ಮೇರೆಗೆ ಮಾತ್ರ ತುರ್ತು ಪರಿಸ್ಥಿತಿ ಹೇರಬಹುದು.
- ಜಮ್ಮು-ಕಾಶ್ಮೀರವು ತನ್ನದೇ ಆದ ಪ್ರತ್ಯೇಕ ಸಂವಿಧಾನ ಹೊಂದಲು ಈ ವಿಧಿಯು ಅವಕಾಶ ನೀಡುತ್ತದೆ.
- ಜಮ್ಮು-ಕಾಶ್ಮೀರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಸಂಸತ್ತಿನ ಅಧಿಕಾರವನ್ನು ಈ ವಿಧಿ ಸೀಮಿತಗೊಳಿಸುತ್ತದೆ.
- ಭದ್ರತೆ, ವಿದೇಶಾಂಗ ವ್ಯವಹಾರ ಮತ್ತು ಸಂಪರ್ಕಕ್ಕೆ ಸಂಬಂಧಿಸಿದಂತೆ ಮಾತ್ರ ಜಮ್ಮು ಕಾಶ್ಮೀರದ ಮೇಲೆ ಕಾನೂನು ರೂಪಿಸಬಹುದು.
- ಕೇಂದ್ರ ಸರ್ಕಾರದ ಇತರೆ ಯಾವುದೇ ಸಂವಿಧಾನಿಕ ಅಧಿಕಾರವನ್ನು ಜಮ್ಮು ಕಾಶ್ಮೀರದ ಮೇಲೆ ಅನ್ವಯಿಸುವ ಮುನ್ನ, ಜಮ್ಮು ಕಾಶ್ಮೀರ ಸರ್ಕಾರದ ಒಪ್ಪಿಗೆ ಪಡೆಯಬೇಕು. ಇದಕ್ಕೆ ಜಮ್ಮು-ಕಾಶ್ಮೀರದ ಸಂವಿಧಾನ ರಚನಾ ಸಭೆಯ ಸಮ್ಮತಿ ಅಗತ್ಯ.
- ಜಮ್ಮು-ಕಾಶ್ಮೀರದ ಸಂವಿಧಾನ ರಚನಾ ಸಭೆಯು ಸಭೆ ಸೇರುವವರೆಗೆ ಮಾತ್ರ ರಾಜ್ಯ ಸರ್ಕಾರಕ್ಕೆ ಸಮ್ಮತಿ ಸೂಚಿಸುವ ಅಧಿಕಾರವಿರುತ್ತದೆ ಅಧಿಕಾರ ಹಂಚಿಕೆಯನ್ನು ಜಮ್ಮು-ಕಾಶ್ಮೀರದ ಸಂವಿಧಾನ ರಚನಾ ಸಭೆಯು ಅಂತಿಮಗೊಳಿಸಿದ ನಂತರ ಅದರಲ್ಲಿ ಯಾವುದೇ ಬದಲಾವಣೆ ಮಾಡಲು ಅವಕಾಶವಿಲ್ಲ.
- ಜಮ್ಮು-ಕಾಶ್ಮೀರದ ಸಂವಿಧಾನ ರಚನಾ ಸಭೆಯ ಶಿಫಾರಸ್ಸಿನ ಆಧಾರದ ಮೇಲೆ ಭಾರತ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಬಹುದು ಎಂದು 370 ವಿಧಿಯ 3ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಈ ವಿಧಿಯು ಸಿಂಧುತ್ವ ಕಳೆದುಕೊಳ್ಳುತ್ತದೆ ಎಂದು ಘೋಷಿಸುವ ಅಧಿಕಾರವನ್ನು ರಾಷ್ಟ್ರಪತಿಗೆ 3ನೇ ಸೆಕ್ಷನ್ ನೀಡುತ್ತದೆ.
- ಜಮ್ಮು-ಕಾಶ್ಮೀರದ ಮುಖ್ಯಮಂತ್ರಿಯನ್ನು ಪ್ರಧಾನಿಯೆಂದು, ರಾಜ್ಯಪಾಲರನ್ನು ಸಾದರ್-ಎ-ರಿಯಾಸತ್ ಎಂದು ಕರೆಯಲಾಗುತ್ತಿತ್ತು.

### ಖಾಯಂ ಆದ ತಾತ್ಕಾಲಿಕ ವಿಶೇಷ ಅಧಿಕಾರ

- ಜಮ್ಮು-ಕಾಶ್ಮೀರದ ರಚನಾ ಸಭೆಯು 1951 ಅಕ್ಟೋಬರ್ 31 ರಂದು ಮೊದಲ ಸಭೆ ಸೇರಿತು. ಆಗ ಸಂವಿಧಾನ ಬದಲಾವಣೆ ಸಂಬಂಧ ಒಪ್ಪಿಗೆ ಸೂಚಿಸಬಹುದಾಗಿದ್ದ ಜಮ್ಮು-ಕಾಶ್ಮೀರ ರಾಜ್ಯ ಸರ್ಕಾರದ ಅಧಿಕಾರವು ರದ್ದಾಯಿತು.
- 1956 ನವೆಂಬರ್ 17 ರಂದು ಜಮ್ಮು-ಕಾಶ್ಮೀರದ ಪ್ರತ್ಯೇಕ ಸಂವಿಧಾನದ ಅಂಗೀಕಾರದ ಮೂಲಕ, ರಾಜ್ಯ ಸಂವಿಧಾನ ರಚನಾ ಸಭೆಯು ಅಂತ್ಯಗೊಂಡಿತು. ಆದರೆ ಭಾರತ ಸಂವಿಧಾನದ 370ನೇ ವಿಧಿಯನ್ನು ರದ್ದು ಪಡಿಸುವ & ಮುಂದುವರಿಸುವ ಈ ಸಭೆಯು ಯಾವ ಪ್ರಸ್ತಾಪವನ್ನು ಮಾಡಿಲ್ಲ.
- ಹೀಗಾಗಿ ತಾತ್ಕಾಲಿಕವಾಗಿ ನೀಡಿದ್ದ ವಿಶೇಷ ಅಧಿಕಾರವನ್ನು ಶಾಶ್ವತ ಅಧಿಕಾರವಾಗಿ ಮುಂದುವರೆಯಿತು. ಅನಂತರದ ವರ್ಷಗಳಲ್ಲಿ ಜಮ್ಮು-ಕಾಶ್ಮೀರ ಹಾಗೂ ಕೇಂದ್ರ ಸರ್ಕಾರದ ನಡುವಿನ ಅಧಿಕಾರ ಹಂಚಿಕೆ ನಡೆದಿದೆ. ರಾಜ್ಯ ಸರ್ಕಾರದ ಸಮ್ಮತಿಯ ಮೇರೆಗೆ ಇಂತಹ ಹಂಚಿಕೆ ನಡೆದಿದೆ.

### ಸುಪ್ರೀಂಕೋರ್ಟ್‌ನ ಆದೇಶ

- ಭಾರತದ ಸ್ಟೇಟ್ ಬ್ಯಾಂಕ್ ಮತ್ತು ಸಂತೋಷ್ ಗುಪ್ತ ನಡುವಿನ ವ್ಯಾಜ್ಯದಲ್ಲಿ ಸುಪ್ರೀಂಕೋರ್ಟ್ ಈ ಕೆಳಕಂಡತೆ ಆದೇಶಿಸಿದ. ಸಂವಿಧಾನದ 370ನೇ ವಿಧಿಯನ್ನು ಜಮ್ಮು ಕಾಶ್ಮೀರದ ಸಂವಿಧಾನ ರಚನಾ ಸಭೆಯ ಒಪ್ಪಿಗೆ ಮೂಲಕವಷ್ಟೇ ರದ್ದುಪಡಿಸಬಹುದು ಎಂದು ಸಂವಿಧಾನದ 370 (3)ನೇ ವಿಧಿಯು ಹೇಳುತ್ತದೆ. ರಾಜ್ಯದ ಸಂವಿಧಾನ ಸಭೆಯು ರದ್ದಾಗಿರುವ ಕಾರಣ 370ನೇ ವಿಧಿಯು ನೀಡುವ ವಿಶೇಷ ಅಧಿಕಾರವು ಶಾಶ್ವತವಾಗಿ ಮಾರ್ಪಟ್ಟಿದೆ.

Scanned by CamScanner

Scanned by CamScanner

downloaded from: www.kpscvaani.com

# 370ನೇ ವಿಧಿ ಮತ್ತು 35ಎ ವಿಧಿಯ ರದ್ದತಿಯ ಪರಿಣಾಮ

ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತಿದ್ದ 370ನೇ ವಿಧಿ ಮತ್ತು 35ಎ ವಿಧಿಯನ್ನು ಕೇಂದ್ರ ಸರ್ಕಾರವು ರದ್ದು ಮಾಡಿರುವುದರ ಹಿನ್ನಲೆಯಲ್ಲಿ ಅನೇಕ ಪರಿಣಾಮಗಳು ಉಂಟಾಗಿವೆ.

### ಏಕ ಪೌರತ್ವ

ಜಮ್ಮು ಕಾಶ್ಮೀರದಲ್ಲಿ ಇನ್ನು ಮುಂದೆ ಏಕ ಪೌರತ್ವ ಜಾರಿಯಲ್ಲಿರುತ್ತದೆ. ಇದುವರೆಗೂ ಇದ್ದ ದ್ವಿಪೌರತ್ವ ಪದ್ಧತಿ ರದ್ದಾಗಲಿದೆ. ಜಮ್ಮು-ಕಾಶ್ಮೀರದಲ್ಲಿ ಮಾತ್ರ ರಾಜ್ಯ ಮತ್ತು ರಾಷ್ಟ್ರಗಳ ಎರಡು ಪೌರತ್ವವನ್ನು ಕೂಡ ಪ್ರಜೆಗಳು ಹೊಂದಿದ್ದರು. ಆದರೆ ವಿಶೇಷ ಸ್ಥಾನಮಾನ ರದ್ದಾದ ಹಿನ್ನಲೆಯಲ್ಲಿ ಇಲ್ಲಿನ ಪ್ರಜೆಗಳು ಇತರೆ ರಾಜ್ಯಗಳ ಪ್ರಜೆಗಳಂತೆ ಏಕ ಪೌರತ್ವ ಹೊಂದಿರುತ್ತಾರೆ.

### ಪ್ರತ್ಯೇಕ ಸಂವಿಧಾನ ಮತ್ತು ಪ್ರತ್ಯೇಕ ಧ್ವಜವಿಲ್ಲ

- ಜಮ್ಮು-ಕಾಶ್ಮೀರ ರಾಜ್ಯವು ದೇಶದಲ್ಲೇ ಪ್ರತ್ಯೇಕ ಸಂವಿಧಾನವನ್ನು ಹೊಂದಿದೆ ಮತ್ತು ಪ್ರತ್ಯೇಕ ಧ್ವಜವನ್ನು ಹೊಂದಿತ್ತು. ಆದರೆ ವಿಶೇಷ ಸ್ಥಾನಮಾನ ರದ್ದಾದ ಹಿನ್ನಲೆಯಲ್ಲಿ ಜಮ್ಮು ಕಾಶ್ಮೀರವು ಪ್ರತ್ಯೇಕ ಸಂವಿಧಾನ ಮತ್ತು ಪ್ರತ್ಯೇಕ ಧ್ವಜವನ್ನು ಹೊಂದಿರುವುದಿಲ್ಲ. ಭಾರತದ ಸಂವಿಧಾನ ಮತ್ತು ಭಾರತದ ರಾಷ್ಟ್ರಧ್ವಜವೇ ಅನ್ವಯವಾಗುತ್ತದೆ.
- ವಿಶೇಷ ಸ್ಥಾನಮಾನದ ಹಿನ್ನಲೆಯಲ್ಲಿ ಪ್ರತ್ಯೇಕ ರಾಜ್ಯ ಧ್ವಜ ಹೊಂದುವ ಅಧಿಕಾರ ಸಿಕ್ಕಿತ್ತು. ರಾಷ್ಟ್ರಧ್ವಜದ ಸಮಾಂತರವಾಗಿ ರಾಜ್ಯ ಧ್ವಜವನ್ನು ಹಾರಿಸಬಹುದಾಗಿತ್ತು. ಆದರೆ ಬೇರೆ ರಾಜ್ಯಗಳಲ್ಲಿ ರಾಷ್ಟ್ರಧ್ವಜಕ್ಕಿಂತ ಎತ್ತರವಾಗಿ ಅಥವಾ ರಾಷ್ಟ್ರಧ್ವಜಕ್ಕೆ ಅಗೌರವ ತೋರುವಂತೆ ರಾಜ್ಯ ಧ್ವಜ ಅಥವಾ ಇನ್ನಾವುದೇ ಧ್ವಜವನ್ನು ಹಾರಿಸುವಂತಿಲ್ಲ.
- ವಿಶೇಷ ಸ್ಥಾನಮಾನ ರದ್ದಾದ ಬಳಿಕ ಈ ಪ್ರತ್ಯೇಕ ಧ್ವಜದ ಸ್ಥಾನಮಾನ ಕೂಡ ಹೋಗುತ್ತದೆ. ಇನ್ನು ಮುಂದೆ ಭಾರತದ ಧ್ವಜಾರೋಹಣ ಮಾತ್ರ ಕಣಿವೆ ರಾಜ್ಯದಲ್ಲಿ ನಡೆಯಲಿದೆ.

### ಜಮ್ಮು-ಕಾಶ್ಮೀರದ ಧ್ವಜದಲ್ಲಿ ಏನಿತ್ತು?

ಕೆಂಪು ವರ್ಣದ ಧ್ವಜದಲ್ಲಿ ಜಮ್ಮು, ಕಾಶ್ಮೀರ ಮತ್ತು ಲಡಾಕ್ ಪ್ರಾಂತ್ಯವನ್ನು ಪ್ರತಿನಿಧಿಸುವ 3 ಬಿಳಿ ಗೆರೆಗಳಿವೆ. ಅದರ ಪಕ್ಕದಲ್ಲಿ ಕೃಷಿ ಕಾಯಕ ಸಂಕೇತವಾದ ನೇಗಿಲು ಇದೆ. ಧ್ವಜದ ಕೆಂಪು ವರ್ಣವು ಕ್ರಾಂತಿಯ ಸಂಕೇತವಾಗಿದೆ. ಈ ಧ್ವಜವು ರಾಜ್ಯದ ಪ್ರತ್ಯೇಕತೆಯನ್ನು ಸೂಚಿಸುವ ಸಂಕೇತವಾಗಿತ್ತು.



- **ಕಾನೂನು ಸುವ್ಯವಸ್ಥೆ ಕೇಂದ್ರದ ಕೈನಲ್ಲಿ:-** ನೂತನವಾಗಿ ರಚಿತವಾದ ಈ ಕೇಂದ್ರಾಡಳಿತ ಪ್ರದೇಶದಲ್ಲಿ ಎಲ್ಲ ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆ ಮೇಲೆ ಕೇಂದ್ರ ಸರ್ಕಾರವೇ ಇನ್ನು ಮುಂದೆ ಸಂಪೂರ್ಣ ಅಧಿಕಾರ ಹೊಂದಿರಲಿದೆ.
- **ರಾಜ್ಯಪಾಲರ ಬದಲಿಗೆ ಲೆಫ್ಟಿನೆಂಟ್ ಗೌರ್ವನರ್:-** ಜಮ್ಮು-ಕಾಶ್ಮೀರದಲ್ಲಿ ಇನ್ನು ಮುಂದೆ ರಾಜ್ಯಪಾಲರ ಸ್ಥಾನವನ್ನು ರಾಷ್ಟ್ರಪತಿಗಳ ಆಡಳಿತಾತ್ಮಕ ಪ್ರತಿನಿಧಿಯಾಗಿರುವ ಲೆಫ್ಟಿನೆಂಟ್ ಗವರ್ನರ್ ಅವರು ತುಂಬಲಿದ್ದಾರೆ.
- **ರಾಜ್ಯ ಸಭಾ ಸ್ಥಾನ ಯಥಾಸ್ಥಿತಿ:-** ರಾಜ್ಯಸಭೆಗೆ ಈಗಿನಂತೆಯೇ ಇನ್ನು ಮುಂದೆಯೂ ಜಮ್ಮು ಕಾಶ್ಮೀರದಿಂದ 4 ಸದಸ್ಯರನ್ನು ಆರಿಸಿ ಕಳುಹಿಸಬಹುದು.
- **ಒಂದೇ ಹೈಕೋರ್ಟ್:-** ಪ್ರಸ್ತುತ ಇರುವ ಜಮ್ಮು ಹೈಕೋರ್ಟ್‌ನ ವ್ಯಾಪ್ತಿಗೆ ಲಡಾಕ್ ಕೇಂದ್ರ ಪ್ರದೇಶವು ಸೇರಿದ್ದು, ಎರಡಕ್ಕೂ ಒಂದೇ ಹೈಕೋರ್ಟ್ ಇರಲಿದೆ.

### ಜಮ್ಮು-ಕಾಶ್ಮೀರದಲ್ಲಿ ವಿಧಾನಸಭೆ ಅಸ್ತಿತ್ವ

- ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು-ಕಾಶ್ಮೀರದಲ್ಲಿ ವಿಧಾನಸಭೆಯು ಇರುತ್ತದೆ. ಆದರೆ ಅದರ ಅವಧಿಯು 6 ವರ್ಷಗಳಿಂದ 5 ವರ್ಷಕ್ಕೆ ಇಳಿಕೆಯಾಗುತ್ತದೆ. ಬೇರೆ ರಾಜ್ಯದ ಮಹಿಳೆಯರಂತೆ ಇಲ್ಲಿನ ಮಹಿಳೆಯರಿಗೆ ಎಲ್ಲಾ ಹಕ್ಕುಗಳು ಲಭಿಸಲಿವೆ.
- ವಿಧಾನಸಭೆಯ ಕ್ಷೇತ್ರಗಳ ಸಂಖ್ಯೆಯು 107 ರಿಂದ 114ಕ್ಕೆ ಏರಿಕೆಯಾಗಲಿದೆ. ಇದರಲ್ಲಿ 24 ಸ್ಥಾನಗಳನ್ನು ತಾಂತ್ರಿಕವಾಗಿ ಪಿಒಕೆಗೆ ಮೀಸಲು ಇಡಲಾಗಿದೆ. ಲಡಾಕ್‌ನಲ್ಲಿ ವಿಧಾನಸಭೆ ಅಸ್ತಿತ್ವದಲ್ಲಿರುವುದಿಲ್ಲ. ಲಡಾಕ್‌ಗೆ ಒಂದು ಸಂಸತ್ ಸ್ಥಾನವನ್ನು ಮೀಸಲಿರಿಸಲಾಗಿದೆ.

### ಕಾಶ್ಮೀರಿ ಪಂಡಿತರ ವಾಪಸಾತಿಗೆ ಅನುಕೂಲ

1990ರ ದಶಕದಲ್ಲಿ ಕಾಶ್ಮೀರಿ ಕಣಿವೆಯನ್ನು ತೊರೆದಿದ್ದ ಕಾಶ್ಮೀರಿ ಪಂಡಿತರು ಮರಳಿ ಬರಲು ಸಹಕಾರಿಯಾಗಿದೆ. 1990ರಲ್ಲಿ ಕಣಿವೆಯಿಂದ 7.5ಲಕ್ಷ ಮಂದಿ ಒತ್ತಾಯ ಪೂರ್ವಕವಾಗಿ ಕಾಶ್ಮೀರಿ ಪಂಡಿತರನ್ನು ಗಡಿಪಾರು ಮಾಡಲಾಗಿತ್ತು. ಮಕ್ಕಳಿಗೆ ಶಿಕ್ಷಣದ ಹಕ್ಕು ದೊರೆಯಲಿದೆ.

### ರದ್ದತಿಯಿಂದ ಜಮ್ಮು-ಕಾಶ್ಮೀರದ ಅಭಿವೃದ್ಧಿ

ಜಮ್ಮು-ಕಾಶ್ಮೀರ ರಾಜ್ಯವನ್ನು 2 ಕೇಂದ್ರಾಡಳಿತ ಪ್ರದೇಶವಾಗಿ ನಿರ್ಮಾಣ ಮಾಡಿದ್ದು, ಈ ಪ್ರದೇಶಗಳಿಗೆ ಸಾರ್ವಜನಿಕ ಮತ್ತು ಖಾಸಗಿವಲಯಗಳಿಂದ ಅಪಾರ ಬಂಡವಾಳ ಹರಿದು ಬರಲಿದೆ. ಇದರಿಂದ ಪ್ರಾಂತ್ಯಗಳ ಅಭಿವೃದ್ಧಿಯಾಗಲಿದೆ. ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳು ಮತ್ತು ಉದ್ಯಮ ಸಂಸ್ಥೆಗಳು ಇಲ್ಲಿ ಸ್ಥಾಪನೆಯಾಗಲಿವೆ. ಇಲ್ಲಿ ಪ್ರವಾಸೋದ್ಯಮವು ತ್ವರಿತವಾಗಿ ಬೆಳೆಯಲಿದೆ.

### ಸಮಾನತೆ ಮನೋಭಾವ

ದೇಶದ ಬೇರೆ-ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಉದ್ಯೋಗದಲ್ಲಿರುವ ಜಮ್ಮು ಕಾಶ್ಮೀರದ ಜನತೆಯನ್ನು ಇನ್ನು ಸಮಾನತೆಯಿಂದ ಕಾಣಲಾಗುತ್ತದೆ. ಅವರನ್ನು ವಿಶೇಷ ಪ್ರಜೆಗಳು ಎಂದು ಪ್ರತ್ಯೇಕಿಸುವುದು ನಿಲ್ಲುತ್ತದೆ. ಈ ಮೂಲಕ ಸಮಾನತೆಯ ಕಾಣಲಿದೆ.

### ಮಹಿಳೆಯರ ನೇಮಕಕ್ಕೆ ಅವಕಾಶ

ಹೊಸ ನಿಯಮದ ಪ್ರಕಾರ ಲೆಫ್ಟಿನೆಂಟ್ ಗವರ್ನರ್ ಅವರಿಗೆ ಮಹಿಳಾ ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಎಂದು ಕಂಡು ಬಂದರೆ ಇಬ್ಬರು ಮಹಿಳಾ ಪ್ರತಿನಿಧಿಗಳನ್ನು ನಾಮನಿರ್ದೇಶನದ ಮೂಲಕ ಆಯ್ಕೆ ಮಾಡಬಹುದು.

**ಅಲ್ಪಸಂಖ್ಯಾತರಿಗೆ ಶೇ.16ರಷ್ಟು ಮೀಸಲಾತಿ :-** ಇದುವರೆಗೂ ಜಮ್ಮು ಕಾಶ್ಮೀರದಲ್ಲಿ ಅಲ್ಪಸಂಖ್ಯಾತರು, ದಲಿತರುಗಳಿಗೆ ಮೀಸಲಾತಿ ಸೌಲಭ್ಯವಿರಲಿಲ್ಲ ಅಲ್ಲಿನ ಮೂಲ ನಿವಾಸಿಗಳಿಗೆ ಮಾತ್ರ ಮೀಸಲಾತಿ ಇತ್ತು. ವಿಶೇಷ ಸ್ಥಾನಮಾನ ರದ್ದತಿಯ ಹಿನ್ನಲೆಯಲ್ಲಿ ಜಮ್ಮು-ಕಾಶ್ಮೀರದ ಅಲ್ಪಸಂಖ್ಯಾತರಿಗೆ ಶೇ16ರಷ್ಟು ಮೀಸಲಾತಿ ದೊರೆಯಲಿದೆ.

**ಸಂವಿಧಾನದ 360ನೇ ವಿಧಿ ಅನ್ವಯವಾಗುತ್ತದೆ:-** ಸಂವಿಧಾನದ 360ನೇ ವಿಧಿಯು ಆರ್ಥಿಕ ತುರ್ತು ಪರಿಸ್ಥಿತಿಯನ್ನು ಒದಗಿಸುತ್ತದೆ. ಇದು ಈ ಮೊದಲು ಜಮ್ಮು-ಕಾಶ್ಮೀರಕ್ಕೆ ಅನ್ವಯವಾಗುತ್ತಿರಲಿಲ್ಲ. ವಿಶೇಷ ಸ್ಥಾನಮಾನ ರದ್ದತಿ ಹಿನ್ನಲೆಯಲ್ಲಿ ಈ ವಿಧಯು ಜಮ್ಮು ಕಾಶ್ಮೀರಕ್ಕೆ ಅನ್ವಯವಾಗುತ್ತದೆ.

**ಜಮ್ಮು-ಕಾಶ್ಮೀರದಲ್ಲಿ ಪಂಚಾಯತ್ ವ್ಯವಸ್ಥೆ:** ಬೇರೆ ರಾಜ್ಯಗಳಂತೆ ಇಲ್ಲಿನ ಪಂಚಾಯಿತಿಗಳಿಗೂ ಅದೇ ಮಾದರಿಯ ಹಕ್ಕುಗಳು ಇರಲಿವೆ.

Scanned by CamScanner
Scanned by CamScanner

downloaded from: www.kpscvaani.com

## ಜಮ್ಮು ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಕನಸು ಕಂಡ ಪ್ರಮುಖ ನಾಯಕರುಗಳು

### ಆರ್‌ಎಸ್‌ಎಸ್‌ನ ನಾಯಕ ಪಂಡಿತ್ ದೀನ್ ದಯಾಳ್ ಅವರ ಕನಸು



- "ಏಕ್ ದೇಶ್ ಮೇ ದೋ ವಿಧಾನ್, ಔರ್ ದೌರ್ ನಿಶಾನ್ ನಹಿ ಚಲೇಂಗೆ" (ಒಂದು ರಾಷ್ಟ್ರದಲ್ಲಿ ಎರಡು ಕಾನೂನು, ಇಬ್ಬರು ಮುಖ್ಯಸ್ಥರು ಹಾಗೂ ಎರಡು ಧ್ವಜ ನಡೆಯುವುದಿಲ್ಲ ಎಂಬುದು ಆರ್‌ಎಸ್‌ಎಸ್ ಮುಖಂಡರಾಗಿದ್ದ ಪಂಡಿತ್ ದೀನ್ ದಯಾಳ್ ಅವರ ಘೋಷಣೆಯಾಗಿತ್ತು.)
- ಆ ಘೋಷಣೆಯ ಮೂಲಕ ಬಿಜೆಪಿ ಜನ್ಮ ತಾಳಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ 370ನೇ ವಿಧಿಯನ್ನು ಮತ್ತು 35ಎ ವಿಧಿಯನ್ನು ರದ್ದುಗೊಳಿಸುವುದಾಗಿ ಘೋಷಿಸಿತ್ತು.

### ಶ್ಯಾಂ ಪ್ರಸಾದ್ ಮುಖರ್ಜಿ



- ಒಂದು ದೇಶದಲ್ಲಿ ಎರಡು ಸಂವಿಧಾನ, ಎರಡು ಗುರುತು, ಎರಡು ಪ್ರಧಾನಿಗಳು ನಡೆಯುವುದಿಲ್ಲ ಎಂದು ಗಟ್ಟಿ ಧ್ವನಿಯಲ್ಲಿ 1952ರಲ್ಲಿ ಹೇಳಿದವರು ಭಾರತೀಯ ಜನಸಂಘದ ಸಂಸ್ಥಾಪಕರಾದ ಶ್ಯಾಂ ಪ್ರಸಾದ್ ಮುಖರ್ಜಿ.
- ಆ ದಿನಗಳಲ್ಲಿ ಜಮ್ಮು ಕಾಶ್ಮೀರದ ಮುಖ್ಯಮಂತ್ರಿಯನ್ನು ಪ್ರಧಾನ ಮಂತ್ರಿ ಎಂದು ಕರೆಯಲಾಗುತ್ತಿತ್ತು. ಶ್ಯಾಂ ಪ್ರಸಾದ್ ಅವರು 1951ರಲ್ಲಿ ಜನಸಂಘವನ್ನು ಸ್ಥಾಪಿಸಿದ್ದರು. ಜಮ್ಮು ಕಾಶ್ಮೀರ ಪ್ರವೇಶಕ್ಕೆ ಪರ್ಮಿಟ್ ಪಡೆಯಬೇಕೆಂಬ ಆಗಿನ ನೀತಿಯನ್ನು ವಿರೋಧಿಸಿ ಕಾಶ್ಮೀರಕ್ಕೆ ಬೃಹತ್ ರ್‍ಯಾಲಿಯನ್ನು ನಡೆಸಿ ದೇಶದ ಕಾನೂನುಗಳು ಜಮ್ಮು ಕಾಶ್ಮೀರದಲ್ಲೂ ಜಾರಿಯಾಗಬೇಕು. ಪ್ರತ್ಯೇಕತೆ ತೊಲಗಬೇಕು ಎಂದು ಬಲವಾಗಿ ಪ್ರತಿಪಾದಿಸಿದರು.
- ಅಂದಿನ ಶೇಕ್ ಅಬ್ದುಲ್ಲಾ ಸರ್ಕಾರವು ಶ್ಯಾಂ ಪ್ರಸಾದ್ ಅವರನ್ನು ಬಂಧಿಸಿ ಜೈಲಿಗೆ ಅಟ್ಟಿತು. ಕಾರಾಗೃಹಕ್ಕೆ ಸೇರಿದ ಕೆಲವೇ ದಿನಗಳಲ್ಲಿ ಮುಖರ್ಜಿ ಅವರು ಮೃತಪಟ್ಟರು. ಅವರ ಸಾವಿನ ಕುರಿತಂತೆ ಯಾವುದೇ ತನಿಖೆ ಕೈಗೊಂಡಿಲ್ಲ.

### ಭಾರತ ದೇಶಕ್ಕಾಗುವ ಪ್ರಯೋಜನಗಳು

- ಪ್ರವಾಸಿಗರ ನೆಚ್ಚಿನ ತಾಣವಾದ ಜಮ್ಮು-ಕಾಶ್ಮೀರವನ್ನು ಮುಂದಿನ 5 ವರ್ಷಗಳಲ್ಲಿ ಸ್ವಿಟ್ಜರ್ಲೆಂಡ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಬಹುದು
- ದೇಶ-ವಿದೇಶಗಳ ಉದ್ಯಮಗಳನ್ನು ಆಕರ್ಷಿಸಬಹುದು. ದೇಶದ ಆರ್ಥಿಕತೆ ಬಲಪಡಿಸಿಕೊಳ್ಳಬಹುದು. ಕಣಿವೆ ಭದ್ರತೆ ಕೇಂದ್ರದ ಅಧೀನಕ್ಕೆ ಬರುವುದರಿಂದ ಸ್ಥಳೀಯರನ್ನು ಬಿಟ್ಟು ಇತರ ರಾಜ್ಯದವರನ್ನು ಪೊಲೀಸ್ ಹುದ್ದೆಗಳಲ್ಲಿ ನೇಮಿಸಿ ಭದ್ರತೆಯನ್ನು ಬಲಪಡಿಸಬಹುದು.
- ಪಾಕಿಸ್ತಾನದ ಗಡಿಯಾಚೆಗಿನ ಭಯೋತ್ಪಾದನೆಯನ್ನು ಬೇರು ಮಟ್ಟದಲ್ಲೇ ಎದುರಿಸಬಹುದು.
- ಎನ್‌ಐಎ ಕಾಯ್ದೆಗೆ ಬಲ ಬಂದಿರುವುದರಿಂದ ಪ್ರತ್ಯೇಕವಾದಿಗಳನ್ನು ಕಟ್ಟಿಹಾಕಬಹುದು.
- **ಭಯೋತ್ಪಾದನೆ ನಿಗ್ರಹ:-** ಜಮ್ಮು ಕಾಶ್ಮೀರದಲ್ಲಿ ಸ್ಥಳೀಯ ಆಡಳಿತ ಪ್ರತ್ಯೇಕವಾದಿಗಳ ಪರ ನಿಂತಿದ್ದು, ಇದಲ್ಲದೇ ಪಿಡಿಪಿ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ನಾಯಕರು ಪ್ರತ್ಯೇಕವಾದಿಗಳ ದಾಟಿಯಲ್ಲೇ ಮಾತನಾಡುತ್ತಿದ್ದರು. ಇದರಿಂದ ಭಾರತ ಸರ್ಕಾರದ ಯಾವುದೇ ಯೋಜನೆಗಳು ಕಾಶ್ಮೀರ ಜನರಿಗೆ ತಲುಪದಂತೆ ಆಗಿತ್ತು. ಇನ್ನೊಂದೆಡೆ ಕಾಶ್ಮೀರ ಕಣಿವೆಯಲ್ಲಿ ಹೊರಗಿನವರು ಯಾವುದೇ ಉದ್ಯಮ, ವ್ಯಹವಾರ ನಡೆಸಲು ಅಸಾಧ್ಯವಾದ್ದರಿಂದ ಆರ್ಥಿಕವಾಗಿ ಬೆಳೆಯಲು ಸಾಧ್ಯವಾಗಿರಲಿಲ್ಲ. ಇದರಿಂದ ಸ್ಥಳೀಯ ಯುವಕರಿಗೆ ಪ್ರತ್ಯೇಕವಾದಿಗಳು ಹಾಗೂ ಉಗ್ರ ಸಂಘಟನೆಗಳು ನೀಡುತ್ತಿದ್ದ ಹಣವೇ ಆದಾಯದ ಮೂಲವಾಗಿತ್ತು. ರಾಜ್ಯದ ವಿಭಜನೆ ಹಾಗೂ ವಿಶೇಷ ಸ್ಥಾನಮಾನ ರದ್ದಾಗಿರುವುದು ಈ ಭಯೋತ್ಪಾದನಾ ಆರ್ಥಿಕತೆಗೆ ಹೊಡೆತ ನೀಡಲಿದೆ. ಹಾಗೆಯೇ ರಾಜ್ಯದಲ್ಲಿ ಉದ್ಯೋಗ ಸೃಷ್ಟಿ, ಪ್ರತ್ಯೇಕ ಆರ್ಥಿಕ ವ್ಯವಸ್ಥೆ ರಚನೆಗೆ ವೇದಿಕೆಯಾಗಲಿದೆ. ಇದು ಭಯೋತ್ಪಾದನೆ ನಿಗ್ರಹಕ್ಕೆ ಪೂರಕವಾಗಲಿದೆ.
- ಹೊಸ ಕಾನೂನಿನಿಂದಾಗಿ ಕೇಂದ್ರದಿಂದ ಜಮ್ಮು ಕಾಶ್ಮೀರದಲ್ಲಿ ಸ್ಥಳೀಯ ಪೊಲೀಸ್ ವ್ಯವಸ್ಥೆ ರದ್ದಾಗಲಿದೆ. ದೆಹಲಿಯಲ್ಲಿ ಹೇಗೆ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಪೊಲೀಸ್ ವ್ಯವಸ್ಥೆ ಇದೆಯೋ ಅದೇ ಮಾದರಿಯಲ್ಲಿ ಕೇಂದ್ರ ಸರ್ಕಾರವೇ ಪೊಲೀಸ್ ನೇಮಕಾತಿ ಮಾಡಲಿದೆ.

### 370 ವಿಧಿ ರದ್ದತಿಗೆ ಸಂಬಂಧಿಸಿದಂತೆ ಪಾಕಿಸ್ತಾನದ ಪ್ರತಿಕ್ರಿಯೆ

ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿದ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ಕ್ರಮದ ಬಗ್ಗೆ ಪಾಕಿಸ್ತಾನ ವಿರೋಧ ವ್ಯಕ್ತಪಡಿಸಿದೆ. ಇದರ ವಿರುದ್ಧ ವಿಶ್ವ ಸಂಸ್ಥೆಗೆ ಮನವಿ ಸಲ್ಲಿಸುವುದಾಗಿಯೂ ಹೇಳಿದೆ. ಜಮ್ಮುಕಾಶ್ಮೀರ ವಿವಾದಗ್ರಸ್ತ ಪ್ರದೇಶ ಎಂದು ಅಂತರಾಷ್ಟ್ರೀಯವಾಗಿ ಗುರುತಿಸಲ್ಪಟ್ಟಿದೆ. ಹೀಗಿರುವಾಗ ಇದರ ವಿಷಯದಲ್ಲಿ ಭಾರತ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಲು ಬರುವುದಿಲ್ಲ. ಈಗ ತೆಗೆದುಕೊಂಡಿರುವ ನಿರ್ಧಾರವು ಅಕ್ರಮವಾದುದ್ದು ಎಂದು ಪಾಕಿಸ್ತಾನವು ಪ್ರತಿಕ್ರಿಯಿಸಿದೆ. ಭಾರತದ ಕ್ರಮದಿಂದ ದಿಕ್ಕೆಟ್ಟಿರುವ ಪಾಕಿಸ್ತಾನದ ಅಧ್ಯಕ್ಷ ಆರೀಫ್ ಆಲ್ವಿ ತರಾತುರಿಯಲ್ಲಿ ಸಂಸತ್ತಿನಲ್ಲಿ ಜಂಟಿ ಅಧಿವೇಶನ ಕರೆದು ಚರ್ಚಿಸಿದ್ದಾರೆ.

### ಹಿಂದಿನ ಜಮ್ಮುಕಾಶ್ಮೀರದ ಸ್ಥಿತಿಗತಿಗಳು

ಜಮ್ಮು ಕಾಶ್ಮೀರವನ್ನು ಹೆಚ್ಚು ಅವಧಿಗೆ ಆಳಿದ್ದು, **ನ್ಯಾಷನಲ್ ಕಾನ್ಫರೆನ್ಸ್, ಶೇಖ್ ಅಬ್ದುಲ್ಲಾ, ಫಾರುಕ್ ಅಬ್ದುಲಾ ಮತ್ತು ಒಮರ್ ಅಬ್ದುಲಾ** ಹೀಗೆ 3 ಮೂರು ಪೀಳಿಗೆಗಳು (ಅಜ್ಜ, ಅಪ್ಪ, ಮೊಮ್ಮಗ) ಮುಖ್ಯಮಂತ್ರಿಗಳಾಗಿ ಆಳ್ವಿಕೆ ಮಾಡಿದ್ದರು. ರಾಜ್ಯದಲ್ಲಿ ಉಗ್ರರ ನುಸುಳುವಿಕೆ ಬಗ್ಗೆ ಮೃದು ಧೋರಣೆ ತಳೆದರು. ಪ್ರತ್ಯೇಕವಾದಿಗಳ ಅಟ್ಟಹಾಸ, ಮಿತಿಮೀರಿದಾಗ ಅದನ್ನು ನಿಗ್ರಹಿಸದೇ ಅವರ ಬೇಡಿಕೆಗಳನ್ನು ಈಡೇರಿಸುತ್ತಾ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ್ದರು. ಪಿಡಿಪಿಯ ಮುಫ್ತಿ ಮೊಹಮ್ಮದ್ ಸಹೀದ್ ಎರಡು ಬಾರಿ, ಇವರ ಪುತ್ರಿ ಮೊಹಬೂಬ್ ಮುಫ್ತಿ ಒಂದು ಬಾರಿ ಮುಖ್ಯಮಂತ್ರಿಯಾದರು. ಆದರೆ ಇವರು ಕೂಡಾ ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೆ ಮೃದು ಧೋರಣೆಯನ್ನು ಕೈಗೊಂಡು ಭಯೋತ್ಪಾದನೆ ಉಲ್ಬಣಗೊಳ್ಳುವಲ್ಲಿ ಕಾರಣೀಭೂತರಾಗಿದ್ದರು.

Scanned by CamScanner

Scanned by CamScanner